ಆರೋಗ್ಯ

# ಜಾಂಡೀಸ್‌ಗೆ ಆಯುರ್ವೇದ



ಕಾಮಾಲೆ ಅಥವಾ ಜಾಂಡೀಸ್ ಎಲ್ಲ ವರ್ಗದವರಲ್ಲಿ, ವಯೋಮಾನದವರಲ್ಲಿ ಕಂಡುಬರುವ ಸಾಮಾನ್ಯ ಕಾಯಿಲೆ. ಪಥ್ಯಾಹಾರದ ಸೇವನೆ ಜೊತೆಗೆ ಉತ್ತಮ ಆಯುರ್ವೇದ ಚಿಕಿತ್ಸೆಯಿಂದ ಕಾಮಾಲೆಯನ್ನು ಸಂಪೂರ್ಣ ಗುಣಪಡಿಸಬಹುದು.

■ ಡಾ. ವೀಣಾ ಅರ್ಹಂತ್

ವಿನೀತ ಮನೆಯಲ್ಲಿ ಮೊದಲ ಮಗು ಆಗಮನದ ಸಂಭ್ರಮ. ಆಸ್ಪತ್ರೆಯಲ್ಲಿ ಮಗು ಹುಟ್ಟಿದ ಕೂಡಲೆ ಬಂಧು ಬಳಗಕ್ಕೆಲ್ಲ ಸಿಹಿ ಹಂಚಿದ್ದೇ ಹಂಚಿದ್ದು. ಮಗುವನ್ನು ಪರೀಕ್ಷಿಸಿದ ಮಕ್ಕಳ ತಜ್ಞರು ಮಗುವಿಗೆ ಕಾಮಾಲೆ ಇರುವುದನ್ನು ದೃಢಪಡಿಸಿದರು. ಕೂಡಲೇ ಫೋಟೊ ಥೆರಪಿಗೆ ಮಗುವನ್ನು ಒಳಪಡಿಸಲಾಯಿತು.

ಮೂವತ್ತೈದರ ಹರೀಶ್‌ಗೆ ಇದ್ದಕ್ಕಿದ್ದಂತೆ ಸುಸ್ತು, ಸಣ್ಣಗೆ ಜ್ವರ, ಕಣ್ಣು ಮಂಜು ಮಂಜು, ಮೂತ್ರ ಹಳದಿ ಬಣ್ಣದಿಂದ ಕೂಡಿತ್ತು. ವೈದ್ಯರ ಬಳಿ ಹೋದಾಗ ರಕ್ತಪರೀಕ್ಷೆಗೆ ಆದೇಶಿಸಿದ ವೈದ್ಯರು ತಪಾಸಣೆಯ ಬಳಿಕ ಕಾಮಾಲೆ (ಜಾಂಡೀಸ್) ಇದೆ ಎಂಬುದನ್ನು ಪತ್ತೆ ಹಚ್ಚಿದರು.

ಕಾಮಾಲೆ ಸಾಮಾನ್ಯವಾಗಿ ಎಲ್ಲ ವರ್ಗದವರಲ್ಲಿ ಬರುವ ಕಾಯಿಲೆ. ಕಣ್ಣು, ನಾಲಗೆ, ಉಗುರು, ಚರ್ಮ ಹಾಗೂ ಮೂತ್ರ ಹಳದಿ ಬಣ್ಣವನ್ನು ಹೊಂದಿದ್ದು ಸುಸ್ತು, ಸಂಕಟ ಇದ್ದರೆ ಇದು ಕಾಮಾಲೆ ಕಾಯಿಲೆ ಎಂದು ಯಾರು ಬೇಕಾದರೂ ಹೇಳಬಹುದು.

ಇದಕ್ಕೆ ಆಯುರ್ವೇದ ಚಿಕಿತ್ಸೆಯೇ ಸೂಕ್ತ ಪರಿಹಾರ. ಎಷ್ಟೋ ಸಲ ಬೇರೆ ವೈದ್ಯ ಪದ್ಧತಿಯ ವೈದ್ಯರು ಕಾಮಾಲೆ ರೋಗಿಗಳಿಗೆ ಕೂಡಲೆ ಆಯುರ್ವೇದ ಚಿಕಿತ್ಸೆಗೆ ಶಿಫಾರಸ್ಸು ಮಾಡಿದ್ದು ಉಂಟು.

ಸಂಸ್ಕೃತದ ಕಾಮಲಾ ಪದವೇ ಕನ್ನಡದ ಕಾಮಲೆ ಆಗಿದೆ. ಹಸಿವಾಗದೇ ಇರುವುದು ಈ ಕಾಯಿಲೆಯ ಮುಖ್ಯ ಲಕ್ಷಣ. ಆಯುರ್ವೇದ ವೈದ್ಯ ಶಾಸ್ತ್ರದಲ್ಲಿ ಉತ್ಪತ್ತಿಗನುಗುಣವಾಗಿ ಇದನ್ನು ರುದ್ಧಪಥ ಕಾಮಲಾ ಮತ್ತು ಕೋಷ್ಠಶಾಖಾಶ್ರಿತ ಕಾಮಲಾ ಎಂದು ವರ್ಗೀಕರಿಸಲಾಗಿದೆ. ಈ ಎರಡು ಹಂತಗಳಿಗೂ ಬೇರೆ ಬೇರೆ ಕಾರಣ ಮತ್ತು ಚಿಕಿತ್ಸಾ ಹಂತಗಳಿವೆ.

ರುದ್ಧಪಥಕಾಮಲ: ಇದು ಪಿತ್ತವಾಹಿನಿಯ ಅವರೋಧದಿಂದ ಉಂಟಾಗುತ್ತದೆ. ಇದರಲ್ಲಿ ಮಲವು ಬಿಳಿ ಬಣ್ಣದ್ದಾಗಿರುತ್ತದೆ.

ಶೀತ, ಜೀರ್ಣಕ್ಕೆ ಕಷ್ಟವಾದ ಪದಾರ್ಥಗಳು, ಬೇಕರಿ ಕುರುಕುಲುಗಳು, ಸಿಹಿ ಪದಾರ್ಥಗಳ ಅತಿಸೇವನೆ, ಹೆಚ್ಚಾಗಿ ವ್ಯಾಯಾಮ ಮಾಡುವುದು, ಮಲ ಮೂತ್ರಗಳನ್ನು ತಡೆಯುವುದು... ಈ ಕಾರಣಗಳಿಂದ ಪಿತ್ತರಸ ಉತ್ಪಾದನೆಗೆ ಕಷ್ಟವಾಗಿ ಕಾಮಾಲೆ ಬರುತ್ತದೆ.

## ಲಕ್ಷಣಗಳು

ಮಲಬದ್ಧತೆ
ಹಸಿವಿಲ್ಲದಿರುವುದು
ಮಲ ಬಿಳಿಪಾಗಿರುವುದು
ಜ್ವರ
ಯಕೃತ್ತಿನ ಭಾಗದಲ್ಲಿ ಊತವಿರುವುದು
ವಾಂತಿ
ಕಣ್ಣು, ಮೂತ್ರ, ಚರ್ಮ ಹಳದಿಯಾಗಿರುವುದು.

ಇವೆಲ್ಲಾ ರುದ್ಧಪಥ ಕಾಮಲೆಯ ಮೊದಲ ಹಂತದ ಲಕ್ಷಣಗಳಾಗಿವೆ.

**ಕೋಷ್ಟ ಶಾಖಾಶ್ರಿತ ಕಾಮಲ**

ಇದರಲ್ಲಿ ಪಿತ್ತದ ಅಂಶವು ಹೊಟ್ಟೆಯನ್ನು ಸೇರಿದಂತೆ ಶರೀರದ ಎಲ್ಲ ಭಾಗಗಳನ್ನು ಆವರಿಸುತ್ತದೆ.

**ಕಾರಣಗಳು**

ಅತಿಯಾದ ಖಾರ, ಹುಳಿ, ಉಪ್ಪು, ಮಸಾಲೆಗಳ ಸೇವನೆ,
ಅತಿ ವ್ಯಾಯಾಮ ಮಾಡುವುದು
ಬಿಸಿಲಿನಲ್ಲಿ ಹೆಚ್ಚಾಗಿ ತಿರುಗಾಡುವುದು
ಮುಂತಾದ



## ಲಕ್ಷಣಗಳು

ಕಾರಣಗಳಿಂದ ಪಿತ್ತವು ಅಧಿಕವಾಗಿ ರಕ್ತ ಮತ್ತು ಮಾಂಸಗಳಲ್ಲಿ ಶೇಖರವಾಗುತ್ತದೆ.

ಜ್ವರ, ಮೈ ಉರಿ, ಸುಸ್ತು/ ತಳಮಳ
ಹಸಿವೆ ಇಂಗಿ ಹೋಗುವುದು
ಕಣ್ಣು, ಉಗುಗರು, ಚರ್ಮ, ಮಲ, ಮೂತ್ರ, ಹಳದಿ ಬಣ್ಣಕ್ಕೆ ತಿರುಗಿ ರೋಗಿ ವಿವರ್ಣನಾಗುತ್ತಾನೆ.

ಯಕೃತ್‌ನಲ್ಲಿ ಊತವಿದ್ದು ನೋವು ಕಾಣಿಸುತ್ತದೆ. ಕಾಮಾಲೆಯು ತೀವ್ರವಾದ ಸಂದರ್ಭದಲ್ಲಿ ಮೈ ಕೈ ಊತ, ಹೊಟ್ಟೆಯಲ್ಲಿ ನೀರು ತುಂಬಿಕೊಳ್ಳುವುದು, ಉಸಿರಾಡಲು ಕಷ್ಟವಾಗುವುದು, ಒಮ್ಮೊಮ್ಮೆ ಪ್ರಜ್ಞೆಯು ತಪ್ಪುತ್ತದೆ. ಆದ್ದರಿಂದ ಕಾಮಾಲೆಯ ಮೊದಲ ಹಂತದಲ್ಲೆ ಆಯುರ್ವೇದ ವೈದ್ಯರ ಸಲಹೆಯ ಮೇರೆಗೆ ಚಿಕಿತ್ಸೆ ತೆಗೆದುಕೊಳ್ಳಬೇಕು.

## ಚಿಕಿತ್ಸೆ ಏನು?

ಮೊದಲು ರೋಗಿಗಳು ದ್ರವ ಪದಾರ್ಥಗಳುಳ್ಳ ಆಹಾರವನ್ನು ಸೇವಿಸಬೇಕು. ಉದಾಹರಣೆಗೆ ನಿಂಬೆರಸ, ದಾಳಿಂಬೆ ರಸ, ಗಂಜಿ, ಇತ್ಯಾದಿ. ರೋಗಿಯು ಜೀರ್ಣಕ್ಕೆ ಭಾರವಾದ ಪದಾರ್ಥಗಳನ್ನು ವರ್ಜಿಸಬೇಕು. ಕಬ್ಬನ್ನು ಕಚ್ಚಿ ಕಚ್ಚಿ ತಿನ್ನಬೇಕು. ಆಯುರ್ವೇದವು ಕಾಮಾಲೆ ರೋಗಿಗಳಿಗೆ ತುಪ್ಪ, ಹಾಲು, ಅನ್ನ ಹಾಗೂ ಉಪ್ಪಿಲ್ಲದ ಆಹಾರವನ್ನು ಪಥ್ಯವಾಗಿ ಹೇಳುತ್ತದೆ.

ಆಯುರ್ವೇದ ಔಷಧಿಗಳಾದ ಕಾಲಮೇಘಾಸವ, ಕಟುಕರೋಹಿಣಾದಿ ಕಷಾಯ, ಭೂಮ್ಯಾಲಕಿ ಚೂರ್ಣ, ಯಕೃತಪ್ಲಿಹಾರಿ ರಸ ಮುಂತಾದವುಗಳನ್ನು ಆಯುರ್ವೇದ ವೈದ್ಯರ ಸೂಕ್ತ ಸಲಹೆಯೊಂದಿಗೆ ತೆಗೆದುಕೊಂಡರೆ ಕಾಮಾಲೆಯನ್ನು ಸಂಪೂರ್ಣವಾಗಿ ಗುಣಪಡಿಸಬಹುದು.

(ವೈದ್ಯೆಯ ಸಂಪರ್ಕ: 991649104)

■